4. ಒಂದು ಪಕ್ಷ ಹುಚ್ಚು ನಾಯಿಯಿಂದ ನರಳುತ್ತಿರುವ ಪ್ರಾಣಿಗಳನ್ನು ಮುಟ್ಟಿದರೆ, ರೇಬಿಸ್ ಚುಚ್ಚುಮದ್ದನ್ನು ಹಾಕಿಸಿಕೊಳ್ಳಬೇಕು.

ಪರೋಪ ಜೀವಿಗಳಿಂದ ಬರುವ ರೋಗಗಳು:

ಒಳ ಪರಾವಲಂಬಿ ಜೀವಿಗಳು

1. **ಜಂತು ಹುಳುವಿನ ರೋಗ** : ಈ ರೋಗವು ಎಮ್ಮೆ ಮತ್ತು ಆಕಳುಗಳ ಕರುಗಳಲ್ಲಿ ಬಹಳ ಬರುತ್ತದೆ.



ಲಕ್ಷಣಗಳು : ಕರುಗಳ ಬೆಳವಣಿಗೆ ಕುಂಠಿತವಾಗುವುದು, ತೂಕ ಕಡಿಮೆಯಾಗಿ ಹೊಟ್ಟೆಯು ದೊಡ್ಡದಾಗಿ ಇರುತ್ತದೆ, ದೇಹದ ಕೂದಲು ಒರಟಾಗಿ ಹೆಚ್ಚಿಗೆ ಬೆಳೆದಿರುತ್ತದೆ, ಮಂಕಾಗಿ ಮಲಗಿರುತ್ತದೆ, ದೇಹದ ಉಷ್ಣವು ಕಡಿಮೆಯಾಗಿ ಮೈಯೆಲ್ಲಾ ತಣ್ಣಗಿರುತ್ತದೆ.

ಈ ಬಾಧೆಗೆ ಒಳಗಾದ ತಾಯಿಯ ಹಾಲನ್ನು ಕರುಗಳು ಕುಡಿದರೆ ಈ ರೋಗ ಬರುತ್ತದೆ. ಭ್ರೂಣ ಬೆಳೆಯುತ್ತಿರುವಾಗ ತಾಯಿಯಿಂದ ಕರುವಿಗೆ ಬರುತ್ತದೆ. ಅಥವಾ ಜಂತಿನ ಮರಿಗಳಿಂದ ಕಲುಷಿಗೊಂಡ ನೀರು ಅಥವಾ ಮೇವನ್ನು ಸೇವಿಸಿ ಈ ರೋಗ ಬರುತ್ತದೆ.

ಹತೋಟಿ ಕ್ರಮಗಳು: ಕರುಗಳು ಒಂದು, ಎರಡು, ಮೂರು ಮತ್ತು ನಾಲ್ಕು ತಿಂಗಳಿರುವಾಗ ಪೈಪರೆಜಿನ್ ಎಂಬ ಔಷಧಿಯನ್ನು 5 ರಿಂದ 30 ಮಿ.ಲೀ. ಕುಡಿಸಬೇಕು ಅಥವಾ ಆಲ್‌ಬೆಂಡಜೋಲ್, ಮೆಬೆಂಡ್‌ಜೋಲ್ ಎಂಬ ಮಾತ್ರೆಗಳನ್ನು 150 ಮಿ.ಗ್ರಾಂ ನಷ್ಟು ತಿಂಗಳಿಗೆ ಒಂದರಂತೆ ಕೊಡುವುದು.

2. **ಪೇಶಿಯೋಲಿಯಾಸಿಸ್:** ಪೇಶಿಯೋಲಾ ಎಂಬ ಪರೋಪ ಜೀವಿಯಿಂದ ಆಕಳು, ಎಮ್ಮೆ ಕುರಿಗಳು ಮತ್ತು ಹಂದಿಗಳಲ್ಲಿ ಬರುತ್ತದೆ.



ಲಕ್ಷಣಗಳು: ಭೇದಿಯಾಗುತ್ತದೆ, ಗಂಟಲಿನ ಕೆಳಗಡೆ ನೀರು ತುಂಬಿದ ಊತ, ಬೆಳವಣಿಗೆ ಕುಂಠಿತಗೊಂಡು, ನಿಶ್ಯಕ್ತಿಯಾಗಿ ಸಾಯುವುದು.

ಕೆರೆ, ಕುಂಟೆ ಮತ್ತು ಕಾಲುವೆಗಳಲ್ಲಿ ನಿಂತಿರುವ ನೀರಿನಲ್ಲಿರುವ ಬಸವನ ಹುಳುಗಳಲ್ಲಿ ಪರೋಪಜೀವಿಗಳ ಮರಿಗಳಿರುತ್ತವೆ, ದನಗಳು ಈ ನೀರನ್ನು ಕುಡಿಯುವುದು ಮತ್ತು ಸುತ್ತ ಬೆಳೆದ ಹುಲ್ಲನ್ನು ತಿನ್ನುವುದರಿಂದ ಈ ರೋಗ ಹರಡುತ್ತದೆ.

ಹತೋಟಿ ಕ್ರಮಗಳು:

1. ಪ್ರಾಣಿಗಳು ಎರಡು, ಮೂರು ತಿಂಗಳಿನ ವಯಸ್ಸಿನಲ್ಲಿದ್ದಾಗ 3 ತಿಂಗಳಿಗೊಮ್ಮೆ ಹೆಕ್ಸಾಕ್ಲೋರಥೇನ್ (20 ಗ್ರಾಂ ಪ್ರತಿ 100 ಕಿ.ಗ್ರಾಂ ದೇಹ ತೂಕಕ್ಕೆ) ಅಥವಾ ಆಕ್ಸಿಕ್ಲೋಜಾನೈಡ್ (1 ಗ್ರಾಂ ಮಾತ್ರೆ ಒಂದು ಆಕಳಿಗೆ ಒಂದು ಬಾರಿ ಮಾತ್ರ) ಔಷಧಿಯನ್ನು ಕುಡಿಸಬೇಕು.
2. ಕೆರೆ, ಕುಂಟೆ ಮತ್ತು ಕಾಲುವೆಗಳಿಗೆ ಆಗಾಗ್ಗೆ ಮೈಲುತುತ್ತು (ಕಾಪರ್ ಸಲ್ಫೇಟ್) ನ್ನು ಸಿಂಪಡಿಸುವುದರಿಂದ ಬಸವನ ಹುಳುಗಳನ್ನು ಸಾಯಿಸಬಹುದು.

ಹೊರ ಪರಾವಲಂಬಿ ಜೀವಿಗಳು:

1. **ಉಣ್ಣೆ, ಚಿಗಟ ಮತ್ತು ಹೇನುಗಳಿಂದಾಗುವ ಹಾನಿಗಳು:**
ಇವು ಆಕಳು, ಎಮ್ಮೆ, ಕುರಿ, ಹಂದಿ, ಆಡುಗಳ ದೇಹದ ಮೇಲೆ ಇರುತ್ತವೆ.



ಲಕ್ಷಣಗಳು: ಇವು ರಕ್ತವನ್ನು ಹೀರುವುದರಿಂದ ರಕ್ತಹೀನತೆ ಕಂಡುಬರುತ್ತದೆ. ಬೆಳವಣಿಗೆ ಕುಂಠಿತವಾಗುತ್ತದೆ. ಹಾಲಿನ ಇಳುವರಿ ಕಡಿಮೆಯಾಗುತ್ತದೆ. ಇವುಗಳಿಂದ ಥೈಲೇರಿಯಾಸಿಸ್, ಬೆಬಿಸಿಯಾಸಿಸ್ ಮತ್ತು ಅನಾಪ್ಲಾಸ್ಮೋಸಿಸ್ ಎಂಬ ರೋಗಗಳು ಹರಡುತ್ತವೆ.

ಹತೋಟಿ ಕ್ರಮಗಳು:

1. ಈ ಪರೋಪಜೀವಿಗಳು ಪ್ರಾಣಿಗಳಿಂದ ಪ್ರಾಣಿಗಳಿಗೆ ಮತ್ತು ಕೊಟ್ಟಿಗೆಯಿಂದ ಪ್ರಾಣಿಗಳಿಗೆ ಹರಡುವದರಿಂದ. ಪ್ರಾಣಿಗಳನ್ನು ಮತ್ತು ಕೊಟ್ಟಗೆಗಳನ್ನು ಯಾವಾಗಲೂ ಸ್ವಚ್ಚವಾಗಿಡಬೇಕು.
2. ಈ ಪರೋಪ ಜೀವಿಗಳು ದೇಹದ ಮೇಲೆ ಕಂಡು ಬಂದರೆ ಬ್ಯೂಟಾಕ್ಸ್ ಎಂಬ ಔಷಕವನ್ನು 2 ಮಿ.ಲೀ. ನ್ನು 1 ಲೀ ನೀರಿಗೆ ಬೆರೆಸಿ ವಾರಕ್ಕೆರಡು ಬಾರಿ ಬಿಸಿಲು ಇರುವ ವೇಳೆ ದೇಹಕ್ಕೆ ಹಚ್ಚಬೇಕು. ಹಚ್ಚುವ ಮೊದಲು ಪ್ರಾಣಿಗಳಿಗೆ ಹೊಟ್ಟೆ ತುಂಬಾ ಆಹಾರ ಮತ್ತು ನೀರನ್ನು ಕೊಟ್ಟಿರಬೇಕು. ನಂತರ ಬಾಯಿ ಕಟ್ಟಿ (ಸಿಕ್ಕ) ಮೈಯನ್ನು ನೆಕ್ಕದಂತೆ ಮಾಡಬೇಕು. ದೇಹದ ಮೇಲೆ ಗಾಯಗಳಿರುವ ಜಾಗಕ್ಕೆ ಹಚ್ಚಬಾರದು. ನಂತರ ದನಗಳನ್ನು ಕಟ್ಟುವ ಕೊಟ್ಟಿಗೆಗೂ ಸಹ ಸಿಂಪಡಿಸಬೇಕು.

2. **ಕಜ್ಜಿ (ಮೇಂಜ್) ತರಹದ ರೋಗ :** ಇವು ಹಲವು ಕಣ್ಣಿಗೆ ಕಾಣದಂತಹ ಪರೋಪಜೀವಿಗಳಿಂದ ಬರುತ್ತದೆ.



ಲಕ್ಷಣಗಳು : ಮೈ ತುಂಬ ಕೆರೆತ (ತುರುಸು), ಮೈಯನ್ನು ಗಟ್ಟಿಯಾದ ವಸ್ತುಗಳಿಗೆ ಉಜ್ಜುವುದು, ಚರ್ಮ ದಪ್ಪಗಾಗುವುದು ಮತ್ತು ಸುಕ್ಕಾಗುವುದು. ಕೂದಲು ಉದುರುವುದು, ಉಜ್ಜಿಕೊಂಡ ಚರ್ಮ ಕೆಂಪಾಗಾಗುವದು, ದೇಹವು ಸೊರಗಿದಂತೆ ಕಾಣುವುದು.

ಹತೋಟಿ ಕ್ರಮಗಳು :

1. ಈ ರೋಗವು ಪ್ರಾಣಿಗಳಿಂದ ಮತ್ತು ಪ್ರಾಣಿಗಳನ್ನು ಕಟ್ಟುವ ಕೋಣೆಯಿಂದ ಬೇರೆ ಪ್ರಾಣಿಗಳಿಗೆ ಹರಡುವದರಿಂದ ಪ್ರಾಣಿಗಳನ್ನು ಮತ್ತು ಕೊಟ್ಟಗೆಗಳನ್ನು ಸ್ವಚ್ಚವಾಗಿಡುವುದು.
2. ದೇಹದ ಭಾಗಗಳಿಗೆ ಮೇಲೆ ಹೇಳಿದ ಬ್ಯೂಟಾಕ್ಸ್ ದ್ರಾವಣವನ್ನು ಹಚ್ಚುವುದು.
3. ಐವರ್‌ಮೆಕ್ಟಿನ್ ಎಂಬ ಔಷಧವನ್ನು ಪಶುವೈದ್ಯರಿಂದ ಕೊಡಿಸುವುದು.

ಲೇಖಕರು	:	ಡಾ. ಪ್ರಹ್ಲಾದ ಡಾ. ಜೆ.ಎನ್. ಶ್ರೀಧರ
ಪ್ರಕಾಶಕರು	:	ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು ಕೃಷಿ ವಿಜ್ಞಾನ ಕೇಂದ್ರ, ರಾಯಚೂರು.
ಪುಟ ವಿನ್ಯಾಸ	:	ದೇವರಾಜ ನಾಯಕ
ಮತ್ತು ಜೋಡಣೆ	:	ಕು. ಸುಮಂಗಳಮ್ಮ ಎಂ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

ಐಸಿಎಆರ್-ಕೃಷಿ ವಿಜ್ಞಾನ ಕೇಂದ್ರ,
ಅಂಚೆ ಪೆಟ್ಟಿಗೆ ಸಂಖ್ಯೆ-329, ರಾಯಚೂರು-584104
ದೂರವಾಣಿ ಸಂಖ್ಯೆ: 0832-220196

ಪ್ರತಿಗಳು : 1000

UASRPC//LL-14/2019-20

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು

ಐಸಿಎಆರ್-ಕೃಷಿ ವಿಜ್ಞಾನ ಕೇಂದ್ರ, ರಾಯಚೂರು



ಜಾನುವಾರುಗಳ ರೋಗಗಳು ಹಾಗೂ ಹತೋಟಿ ಕ್ರಮಗಳು 2019-20

ಐ.ಸಿ.ಎ.ಆರ್-ಕೃಷಿ ವಿಜ್ಞಾನ ಕೇಂದ್ರ,
ರಾಯಚೂರು 584 104

ಕೃಷಿ ಸಮಸ್ಯೆಗಳ ಪರಿಹಾರಕ್ಕಾಗಿ ರೈತರ ಉಚಿತ ಸಹಾಯವಾಣಿ : 1800-425-0470

ಜಾನುವಾರುಗಳ ರೋಗಗಳು ಹಾಗೂ ಹತೋಟಿ ಕ್ರಮಗಳು

I: ಸೂಕ್ಷ್ಮಾಣುಗಳಿಂದ ಬರುವ ರೋಗಗಳು:

1. **ಗಂಟಲು ಬೇನೆ:** ಈ ರೋಗವು ಎಮ್ಮೆ, ಹಂದಿ, ಕುರಿ ಮತ್ತು ಆಡುಗಳಲ್ಲಿ ಹೆಚ್ಚಾಗಿ ಕಂಡು ಬರುತ್ತದೆ.



ಲಕ್ಷಣಗಳು: ವಿಪರೀತ ಜ್ವರ (106–107^0 ಪೆ), ಗಂಟಲಿನ ಕೆಳಗೆ ನೀರಿನಿಂದ ಕೂಡಿದ ಬಾವು, ಜೊಲ್ಲು ಸೋರುವಿಕೆ, ಉಸಿರಾಡಲು ಕಷ್ಟ ಪಡುವುದು, ಕೆಮ್ಮು, ಕಣ್ಣು ಕೆಂಪಾಗುವುದು. ರಕ್ತಮಿಶ್ರಿತ ಭೇದಿಯಾಗುವದು. ಈ ರೋಗವು ಪ್ರಾಣಿಗಳ ಸಿಂಬಳ ಮತ್ತು ಮಲಗಳಿಂದ ಕಲುಷಿತಗೊಂಡ ಆಹಾರ ಮತ್ತು ನೀರನ್ನು ಸೇವಿಸುವದರಿಂದ ರೋಗವು ಹರಡುತ್ತದೆ.

ಹತೋಟಿ ಕ್ರಮಗಳು:

1) ಪ್ರತಿ ವರ್ಷ ಮುಂಗಾರು ಪ್ರಾರಂಭವಾಗುವ ಮುಂಚೆ (ಜೂನ್) ಈ ರೋಗದ ಲಸಿಕೆಯನ್ನು ಹಾಕಿಸಿ ತಡೆಗಟ್ಟಬಹುದು.

2) ರೋಗದಿಂದ ನರಳುತ್ತಿದ್ದರೆ, ಅಂತಹ ಪ್ರಾಣಿಗಳನ್ನು ಬೇರ್ಪಡಿಸಿ ಸೂಕ್ತ ಚಿಕಿತ್ಸೆಯನ್ನು ಕೊಡಿಸುವುದು.

2. ಕಂದು ರೋಗ: ಆಕಳು, ಆಡು, ಎಮ್ಮೆ, ಕುರಿಗಳಲ್ಲಿ ಈ ರೋಗವು ಬರುತ್ತದೆ.



ಲಕ್ಷಣಗಳು: ಗರ್ಭಧರಿಸಿದ ಜಾನುವಾರುಗಳಲ್ಲಿ 5–6 ತಿಂಗಳ ನಂತರ ಗರ್ಭಪಾತವಾಗುವುದು. ಗರ್ಭಧರಿಸದ ಪ್ರಾಣಿಗಳ ಕೆಚ್ಚಲಿನಲ್ಲಿರುವ ಗ್ರಂಥಿಗಳು ಊದಿಕೊಳ್ಳುವದು. ಹೋರಿಗಳಲ್ಲಿ ವೃಷಣ ಊದಿಕೊಳ್ಳುವುದು.

ಈ ರೋಗವು ಗರ್ಭಪಾತವಾದ ಪ್ರಾಣಿಯ ಗರ್ಭಕೋಶದ ಸ್ರಾವ, ಕಂದು ಹಾಕಿದ ಸತ್ತ (ಮಾಸ) ಹಾಗೂ ಮಲಗಳಿಂದ ಕಲುಷಿತಗೊಂಡ ನೀರು ಹಾಗು ಆಹಾರ ಸೇವನೆಯಿಂದ ಅಥವಾ ಕಣ್ಣು ಮತ್ತು ಗಾಯಗೊಂಡ ಚರ್ಮದ ಮೂಲಕ ಸೂಕ್ಷ್ಮಾಣುಗಳು ಒಳ ಹೊಕ್ಕು ರೋಗ ಹರಡುವುದು. ಈ ರೋಗದಿಂದ ಪೀಡಿತವಾದ ಹೋರಿಗಳಿಂದ ಗರ್ಭದಾರಣೆ ಮಾಡಿಸುವದರಿಂದಲೂ ರೋಗ ಹರಡುವುದು.

ಹತೋಟಿ ಕ್ರಮಗಳು:

1) ಪ್ರತಿ ವರ್ಷ 6 ತಿಂಗಳ ಒಳಗಿರುವ ಕರುಗಳಿಗೆ ಚುಚ್ಚು ಮದ್ದನ್ನು ಹಾಕಿಸುವುದು.

2) ಈ ರೋಗದಿಂದ ಪೀಡಿತವಾಗಿರುವ ಪ್ರಾಣಿಗಳನ್ನು ಬೇರ್ಪಡಿಸಿ ಚಿಕಿತ್ಸೆಯನ್ನು ಕೊಡಿಸುವದು.

3) ಈ ರೋಗವಿರುವ ಹೋರಿ ಮತ್ತು ಕೋಣಗಳನ್ನು ಕೃತಕ ಅಥವಾ ನೈಸರ್ಗಿಕ ಗರ್ಭಧಾರಣೆಗೆ ಉಪಯೋಗಿಸದೇ ಇರುವುದು.

3. ಚಪ್ಪೆರೋಗ: ಈ ರೋಗವು ಆಕಳ, ಎಮ್ಮೆ, ಕುರಿ ಹಾಗೂ ಆಡುಗಳಲ್ಲಿ ಕಂಡುಬರುತ್ತದೆ.



ಲಕ್ಷಣಗಳು: ತೀವ್ರ ಜ್ವರ (106–107^0 ಪೆ), ಹೆಗಲಿನ ಕೆಳಭಾಗ ಮತ್ತು ತೊಡೆಯ ಮೇಲ್ಭಾಗದ ಮಾಂಸ ಕಾಂಡಗಳ ನಡುಕ ಮತ್ತು ಊತ, ಇವುಗಳ ಮೇಲೆ ಕೈ ಆಡಿಸಿದಾಗ ಪರ್ ಪರ್ ಎನ್ನುವ ಶಬ್ದ ಬರುತ್ತದೆ. ನೋವಿನಿಂದ ಕುಂಟುವುದು.ಊದಿದ ಭಾಗದಲ್ಲಿ ಚರ್ಮ ಒರಟಾಗಿ ಕಪ್ಪಾಗುವುದು. ಆಹಾರ ಸೇವನೆ ಕಡಿಮೆಯಾಗಿ ಹಾಲಿನ ಪ್ರಮಾಣ ಕಡಿಮೆಯಾಗುವುದು. ಈ ಸೂಕ್ಷ್ಮಾಣುಗಳಿಂದ ಕಲುಷಿತಗೊಂಡ ಆಹಾರ ಮತ್ತು ನೀರನ್ನು ಸೇವಿಸುವದರಿಂದ ಈ ರೋಗವು ಹರಡುತ್ತದೆ.

2. ಈ ರೋಗವು ಹೆಚ್ಚಾಗಿ ಆರು ತಿಂಗಳಿಂದ ಎರಡು ವರ್ಷದ ಪ್ರಾಣಿಗಳಲ್ಲಿ ಕಂಡುಬರುತ್ತದೆ.

ಹತೋಟಿ ಕ್ರಮಗಳು:



1. ಈ ರೋಗದ ಲಸಿಕೆಯನ್ನು ಪ್ರತಿ ವರ್ಷ ಮುಂಗಾರು ಪ್ರಾರಂಭವಾಗುವ ಮುಂಚೆ 6– ತಿಂಗಳು ಮೇಲ್ಪ ಟ್ಟ ಎಲ್ಲಾ ಜಾನುವಾರುಗಳಿಗೆ ಲಸಿಕೆ ಹಾಕಿಸುವುದು. ರೋಗದಿಂದ ನರಳುವ ಪ್ರಾಣಿಗಳನ್ನು ಬೇರ್ಪಡಿಸಿ ಸೂಕ್ತ ಚಿಕಿತ್ಸೆಯನ್ನು ಕೊಡಿಸುವುದು.

4. ನೆರಡಿ ರೋಗ: ಈ ರೋಗವು ಆಕಳು, ಎಮ್ಮೆ, ಕುರಿ ಹಾಗೂ ಮನುಷ್ಯರಲ್ಲಿ ಕಂಡುಬರುವುದು.

ಲಕ್ಷಣಗಳು: ತೀವ್ರ ಜ್ವರ (106–107^0 ಪೆ) ಇದ್ದಕ್ಕಿದ್ದ ಹಾಗೆ ಬಿದ್ದು ಮೈ ನಡಿಗಿಸುವುದು, ಹೊಟ್ಟಿನೋವು, ಮೂಗು, ಕಿವಿ, ಬಾಯಿ, ಗುದದ್ವಾರ ಹಾಗೂ ಯೋನಿಯಿಂದ ಹೆಪ್ಪುಗಟ್ಟದ ಕಪ್ಪು ಬಣ್ಣದ ರಕ್ತಸ್ರಾವವಾಗುವುದು. ಹೆಪ್ಪುಗಟ್ಟದ ರಕ್ತದಿಂದ ಕಲುಷಿತಗೊಂಡ ಆಹಾರ ಹಾಗೂ ನೀರನ್ನು ಸೇವಿಸುವುದರಿಂದ ರೋಗ ಹರಡುವುದು.

ಹತೋಟಿ ಕ್ರಮಗಳು:

1. ಪ್ರತಿ ವರ್ಷ ಜನವರಿ ತಿಂಗಳಲ್ಲಿ ಈ ರೋಗದ ಲಸಿಕೆಯನ್ನು ಕೊಡಿಸುವದರಿಂದ ರೋಗವನ್ನು ತಡೆಗಟ್ಟಬಹುದು.



2. ಈ ರೋಗದಿಂದ ಸತ್ತ ಪ್ರಾಣಿಗಳ ದೇಹವನ್ನು ಮರಣೋತ್ತರ ಪರೀಕ್ಷೆಗೊಳಪಡಿಸದೆ ಸುಡಬೇಕು. ಅಥವಾ ಊಳುವುದಾದರೆ ಗುಂಡಿಯಲ್ಲಿ ಸಾಕಷ್ಟು ಸುಣ್ಣ ಹಾಕಿ ಮುಚ್ಚಬೇಕು. ಇದರ ಜೊತೆಗೆ ಪ್ರಾಣಿಗಳಿಗೆ ಉಪಯೋಗಿಸಿದ ಆಹಾರ,ಬಟ್ಟೆ ಇತರ ವಸ್ತುಗಳನ್ನು ಸಹ ಸುಡಬೇಕು. ಈ ಪ್ರಾಣಿ ಕಟ್ಟಿದ ಜಾಗವನ್ನು ಪೊಟಾಷಿಯಂ ಪರಮ್ಯಾಂಗನೇಟ್ ಅಥವಾ ಪೊಟಾಷಿಯಂ ಹೈಡ್ರಾಕ್ಸೈಡ್ ದ್ರಾವಣದಿಂದ ಸ್ವಚ್ಚಗೊಳಿಸಬೇಕು.

5. ಕೆಚ್ಚಲು ಬಾವು: ಈ ರೋಗವು ಆಕಳು, ಎಮ್ಮೆ, ಆಡು ಮತ್ತು ಕುರಿಗಳಲ್ಲಿ ಬರುತ್ತದೆ.



ಲಕ್ಷಣಗಳು: ಕೆಚ್ಚಲು ಬಾತುಗೊಂಡು ತುಂಬಾ ನೋವಿರುತ್ತದೆ, ಮುಟ್ಟಲು ತುಂಬಾ ಬಿಸಿಯಿರುತ್ತದೆ. ಹಾಲು ಕೆಟ್ಟು ಕೀವು ಮಿಶ್ರಿತ ಹಾಲು ಮೊಸರಿನಂತೆ ಬರುತ್ತದೆ. ಇಲ್ಲವೆ ದಾರದಂತ ಎಳೆಗಳು ಅಥವಾ ಸಣ್ಣ ಗಡ್ಡೆಗಳು ಹಾಲಿನಲ್ಲಿ ಕಾಣಿಸಿಕೊಳ್ಳುತ್ತವೆ. ಹಾಲಿನ ಇಳುವರಿ ಕಡಿಮೆಯಾಗುತ್ತದೆ. ತಕ್ಷಣ ಚಿಕಿತ್ಸೆ ಕೊಡಿಸದಿದ್ದರೆ ಕೆಚ್ಚಲು ಕಲ್ಲಿನಂತೆ ಗಟ್ಟಿಯಾಗಿ ನೀರಿನಂತೆ ಹಾಲು ಬರುತ್ತದೆ.

ಈ ರೋಗವು ಹಾಲನ್ನು ಹಿಂಡುವವರ ಕೈಗಳಿಂದ ಅಥವಾ ಹಾಲು ಹಿಂಡುವ ಯಂತ್ರದಿಂದ ಹರಡುತ್ತದೆ. ಇಲ್ಲವೇ ಕೆಚ್ಚಲು, ಮೊಲೆ ತೊಟ್ಟಿನ ಯಾವುದೇ ಭಾಗದಲ್ಲಿ ಇರುವ ಗಾಯಗಳ ಮುಖಾಂತರ ಸೂಕ್ಷ್ಮಾಣುಗಳು ಒಳ ಹೋಗಿ ಕೆಚ್ಚಲು ಬಾವನ್ನುಂಟುಮಾಡುತ್ತವೆ. ಇದಕ್ಕೆಲ್ಲ ಕೊಟ್ಟಿಗೆಯ ಸ್ವಚ್ಚತೆ ಮತ್ತು ಹಾಲು ಕರೆಯುವವರ ಕೈ ಹಾಗೂ ಯಂತ್ರ ಸ್ವಚ್ಚತೆಯಿಂದರಬೇಕು.

ಹತೋಟಿ ಕ್ರಮಗಳು:

1. ಆಕಳು ಅಥವಾ ಎಮ್ಮೆಗಳ ಕೆಚ್ಚಲನ್ನು ಯಾವಾಗಲೂ ಸ್ವಚ್ಚವಾಗಿಟ್ಟು ಗಾಯಗಳಾಗದಂತೆ ಎಚ್ಚರ ವಹಿಸಬೇಕು.

2. ದನಗಳನ್ನು ಕಟ್ಟುವ ಕೊಟ್ಟಿಗೆಯಯಲ್ಲಿನ ಭಾಗವು ಸ್ವಚ್ಚವಾಗಿ ತೇವಾಂಶವಿರದೇ ಒಣಗಿರಬೇಕು.



3. ಆರೋಗ್ಯವಂತ ಆಕಳುಗಳ ಹಾಲನ್ನು ಹಿಂಡಿದ ನಂತರ ಕೊನೆಗೆ ಕೆಚ್ಚಲು ಬಾವುಗಳಿಂದ ಕೂಡಿದ ಆಕಳುಗಳ ಹಾಲನ್ನು ಹಿಂಡಬೇಕು.

4. ಕೆಚ್ಚಲು ಬಾವಿನಿಂದ ಬಾದಿತವಾದ ಕೆಚ್ಚಲಿನಿಂದ ಬರುವ ಹಾಲನ್ನು ಕೊಟ್ಟಿಗೆಯಲ್ಲಿ ಕಟ್ಟದ ಜಾಗದಲ್ಲಿಯೇ ಹಿಂಡದೇ ಬೇರೆ ಪಾತ್ರೆಯಲ್ಲಿ ಹಿಂಡಿ ದೂರ ಯಾವ ಪ್ರಾಣಿಗಳಿಗೂ ಸಿಗದಂತೆ ಚೆಲ್ಲುವುದು ಅಥವಾ ಗೊಬ್ಬರದ ಗುಂಡಿಯಲ್ಲಿ ಊಳುವುದು.

5. ಆರೋಗ್ಯವಂತ ಆಕಳುಗಳ ಹಾಲು ಕರೆದ ನಂತರ ಮೊಲೆಯ ತೊಟ್ಟುಗಳನ್ನು ಡೆಟಾಲ್ ಅಥವಾ ಸಾವಲಾನ್ ದ್ರಾವಣದಲ್ಲಿ (1 ಲೀಟರ ನೀರಿನಲ್ಲಿ 3 ಚಮಚ ಡೆಟ್ಟಾಲ್/ಸಾವಲಾನ್) 2 ನಿಮಿಷಗಳ ಕಾಲ ಅದ್ದಬೇಕು.

II: ಅತಿ ಸೂಕ್ಷ್ಮಾಣು (ವೈರಸ್) ನಿಂದ ಬರುವ ರೋಗಗಳು:

1. ಕಾಲು ಬಾಯಿ ಜ್ವರ: ಸೀಳು ಗೊರಸುಗಳನ್ನು ಹೊಂದಿದ ಪ್ರಾಣಿಗಳಾದ ಆಕಳು, ಎಮ್ಮೆ, ಹಂದಿ, ಆಡು ಮತ್ತು ಕುರಿಗಳಲ್ಲಿ ವರ್ಷದಲ್ಲಿ ಯಾವಾಗ ಬೇಕಾದರೂ ಬರಬಹುದು. **ಲಕ್ಷಣಗಳು:** ತೀವ್ರ ಜ್ವರ (104–107^0 ಪೆ), ಬಾಯಿಯಲ್ಲಿ ಮತ್ತು ನಾಲಿಗೆಯಲ್ಲಿ ಹುಣ್ಣುಗಳು ಕಾಣಿಸಿಕೊಂಡು ಸತತವಾಗಿ ಜೊಲ್ಲು ಸುರಿಯುವುದು. ಇದರಿಂದ ಆಹಾರ ತಿನ್ನಲು ಆಗುವುದಿಲ್ಲ. ಕಾಲಿನ ಗೊರಸುಗಳ ಮಧ್ಯೆ ಹುಣ್ಣುಗಳಾಗಿ, ಹುಳ ಸೇರಿಕೊಂಡು ಕೀವು ಮಿಶ್ರಿತ ರಕ್ತ ಸೋರುವುದು, ಇದರಿಂದ





ಪ್ರಾಣಿಗಳು ನಡೆಯುವಾಗ ಕುಂಟುತ್ತವೆ. ಹಾಲಿನ ಪ್ರಮಾಣ ಕಡಿಮೆಯಾಗುವುದು. ಚಿಕಿತ್ಸೆ ಕೊಡಿಸಿದ ನಂತರ 2 ವಾರಗಳಲ್ಲಿ ಗುಣಮುಖ ಹೊಂದಿದರೂ ಹಾಲಿನ ಪ್ರಮಾಣ ಮತ್ತೆ ಹೆಚ್ಚಾಗುವುದಿಲ್ಲ. ಪ್ರಾಣಿಗಳು ಬಿಸಿಲಿನಲ್ಲಿ ತೇಗುತ್ತವೆ. ಮೈ ಮೇಲಿನ ಕೂದಲು ಒರಟಾಗಿ ಕರಡಿಯಂತೆ ಕಾಣುವುದು, ಗರ್ಭಕೋಶದ ತೊಂದರೆಯಾಗುವುದು.ಇಂತಹ ಪ್ರಾಣಿಗಳ ಜೊಲ್ಲುನಿಂದ ಕಲುಷಿತಗೊಂಡ ನೀರು ಮತ್ತು ಆಹಾರ ಸೇವಿಸುವದರಿಂದ ಈ ರೋಗವು ಹರಡುತ್ತದೆ. ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಅತಿ ಶೀಘ್ರದಲ್ಲಿ ಹರಡುತ್ತದೆ.

ಹತೋಟಿ ಕ್ರಮಗಳು:

1. ಪ್ರತಿ ವರ್ಷ ಜನವರಿ ಮತ್ತು ಜುಲೈ ತಿಂಗಳಲ್ಲಿ ಎರಡು ಬಾರಿ ಕಾಲು ಬಾಯಿ ಜ್ವರದ ಚುಚುಮದ್ದನ್ನು ಹಾಕಿಸಬೇಕು.
2. ಈ ರೋಗಗ್ರಸ್ತ ದನಗಳನ್ನು ತಕ್ಷಣ ಬೇರ್ಪಡಿಸಿ ಸೂಕ್ತ ಚಿಕಿತ್ಸೆ ನೀಡಿಸುವುದು.
3. ಈ ರೋಗದಿಂದ ನರಳುವ ಆಕಳಿನಿಂದ ಬಂದ ಹಾಲನ್ನು 65^{0}ಸೆಂ.ವರೆಗೆ ಕಾಯಿಸಿ ಕರುಗಳಿಗೆ ಕುಡಿಸಬೇಕು. ಇಲ್ಲವಾದರೆ ಕರುಗಳು ಸಾಯುತ್ತವೆ.

2. ಹುಚ್ಚು ನಾಯಿ ರೋಗ: ಎಲ್ಲಾ ಪ್ರಾಣಿಗಳಲ್ಲಿ ಮತ್ತು ಮನುಷ್ಯರಲ್ಲಿ ಈ ರೋಗ ಬರುತ್ತದೆ.

ಲಕ್ಷಣಗಳು : ನಾಯಿ ಕಚ್ಚಿದ 10 ದಿನಗಳ ಮೇಲೆ ಅಥವಾ ಕೆಲವು ತಿಂಗಳುಗಳಲ್ಲಿ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ, ಬಾಯಿಯಿಂದ ಒಂದೇ ಸಮನೆ ಜೊಲ್ಲು ಸುರಿಯುತ್ತಿದ್ದು ಕಣ್ಣು ಕೆಂಪಗಾಗಿ ನೋಡಲು ವ್ಯಾಘ್ರವಾಗಿ ಕಾಣುತ್ತವೆ, ದಾರಿಯಲ್ಲಿ ಸಿಕ್ಕವರನ್ನು ಕಚ್ಚುವುದು, ಒಂದೇ ಕಡೆ ನೇರ ದೃಷ್ಟಿ ಇಡುವದು, ಒಂದೇ ಸಮನೆ ಒದರುವುದು, ರೋಗದ ಲಕ್ಷಣಗಳು ಕಂಡ 10 ದಿವಸಗಳ ಒಳಗೆ ಪ್ರಾಣಿ ಸಾಯುವುದು.

ಈ ಸೂಕ್ಷ್ಮಾಣುಗಳು ಹುಚ್ಚು ಹಿಡಿದ ನಾಯಿಯ ಜೊಲ್ಲಿನಲ್ಲಿದ್ದು ಇಂತಹ ನಾಯಿ ಯಾವುದೇ ಪ್ರಾಣಿ ಅಥವಾ ಮನುಷ್ಯನಿಗೆ ಕಚ್ಚಿದರೆ ಈ ರೋಗ ಹರಡುವುದು.

ಹತೋಟಿ ಕ್ರಮಗಳು :



1. ಈ ರೋಗವು ನಾಯಿಗಳಿಂದ ಇತರ ಪ್ರಾಣಿಗಳಿಗೆ ಮತ್ತು ಮನುಷ್ಯರಿಗೆ ಬರುವುದರಿಂದ , ಎಲ್ಲ ನಾಯಿಗಳಿಗೆ ರೇಬಿಸ್ ಚುಚ್ಚುಮದ್ದನ್ನು ಪ್ರತಿವರ್ಷ ಮೂರು ತಿಂಗಳು ಮೇಲ್ಪಟ್ಟು ಎಲ್ಲಾ ನಾಯಿಗಳಿಗೆ ಹಾಕಿಸುವದರಿಂದ ತಡೆಗಟ್ಟಬಹುದು.
2. ಹುಚ್ಚುಹಿಡಿದ ನಾಯಿಯಿದ್ದರೆ ತಕ್ಷಣ ಅದನ್ನು ಮಾನವೀಯೆಯ ವಿಧಾನದಿಂದ ಪಶುವೈದ್ಯರ ಸಹಾಯದಿಂದ ಸಾಯಿಸುವುದು.
3. ಹುಚ್ಚು ನಾಯಿಂದ ಕಚ್ಚಿದ ಪ್ರಾಣಿಗಳನ್ನು ತಕ್ಷಣ ಪಶುವೈದ್ಯರಿಂದ ಚಿಕಿತ್ಸೆ ಕೊಡಿಸುವುದು.